	Smshi-Nalavadi road at km.13.00		completed. Preparation of design and estimate is under progress.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (405)209
ಸದಸ್ಯರ ಹೆಸರು : ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ)
ಉತ್ತರಿಸುವ ಸಚಿವರು : (ಪಿ.ಎಂ. ಉದಾಸಿ) ಮಾನ್ಯ ಲೋಕೋಪಯೋಗಿ ಸಚಿವರು

ಅ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯರಗುಪ್ಪಿ – ರೊಟ್ಟಿಗವಾಡ ರಸ್ತೆಯ ಸುಧಾರಣೆಗೆ ಯಾವುದಾದರೂ ಯೋಜನೆ ಅಡಿಯಲ್ಲಿ ಮಂಜೂರಾತಿ ದೊರೆತಿದೆಯೇ?

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಯರಗುಪ್ಪಿ – ರೊಟ್ಟಿಗವಾಡ ರಸ್ತೆಯ ಸರಪಳಿ 0.00 ಕಿ.ಮೀ.ನಿಂದ 6.30ಕಿ.ಮೀ.ವರೆಗಿನ ಅಭಿವೃದ್ಧಿ ಕಾಮಗಾರಿಗೆ ನಬಾರ್ಡ್‌ನ ಆರ್‌ಐಡಿಎಫ್ –11ರ ಯೋಜನೆಯಡಿ (2005–06) 65.00 ಲಕ್ಷ ರೂ ಅಂದಾಜು ಮೊತ್ತದಲ್ಲಿ ಅನುಮೋದನೆಯಾಗಿರುತ್ತದೆ.

ಆ ಹಾಗಿದ್ದಲ್ಲಿ, ಮಂಜೂರಾದ ಮೊತ್ತದಲ್ಲಿ ರಸ್ತೆಯನ್ನು ನಿರ್ಮಿಸಲಾಗಿದೆಯೇ?

ಈ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲಾಗಿದ್ದ, 8.12 ಲಕ್ಷ ರೂ ವೆಚ್ಚ ಮಾಡಲಾಗಿತ್ತು, ಆದರೆ ಈ ರಸ್ತೆಯ ಭಾಗವನ್ನು ಒಳಗೊಂಡಂತೆ 2007–08ನೇ ಸಾಲಿನ ಪ್ರಧಾನಮಂತ್ರಿ ಗಾಮ ಸಡಕ್ ಯೋಜನೆಯಡಿ ಹಂತ–7ರಲ್ಲಿ ಕುಂದಗೋಳ ತಾಲ್ಲೂಕಿನ ಶಿರೂರದಿಂದ ಬಸಾಪುರ, ಹಿರೇನರ್ತಿ, ಯರಗುಪ್ಪಿ ಮಾರ್ಗ ರೊಟ್ಟಿಗವಾಡವರೆಗಿನ ಒಟ್ಟು 16.67 ಕಿ.ಮೀ.ಗಳ ರಸ್ತೆ ಅಭಿವೃದ್ಧಿ ಕೈಗೊಳ್ಳಲು ಜಿಲ್ಲಾ ಪಂಚಾಯತ್ ವತಿಯಿಂದ ಗುತ್ತಿಗೆ ಕರೆದಿರುವುದರಿಂದ, ಸದರಿ ರಸ್ತೆಯ ಅಭಿವೃದ್ಧಿಯನ್ನು ನಬಾರ್ಡ್ ಯೋಜನೆಯಡಿ ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ.

ಇ. ಮಂಜೂರಾತಿ ನೀಡದಿದ್ದಲ್ಲಿ ಈಗಲಾದರೂ ರಸ್ತೆ ಸುಧಾರಣೆಗೆ ಅನುದಾನ ನೀಡಲಾಗುವುದೇ?

ಮೇಲೆ ತಿಳಿಸಿರುವಂತೆ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಪಿಎಂಜಿಎಸ್‌ವೈ ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಇಲಾಖೆಯು ಗುತ್ತಿಗೆ ನಿಗದಿಪಡಿಸಲು ಕ್ರಮ ಕೈಗೊಳ್ಳುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (267)210
ಸದಸ್ಯರ ಹೆಸರು : ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್. ಯಡಿಯೂರಪ್ಪ)

ಮಾನ್ಯ ಮುಖ್ಯಮಂತ್ರಿಗಳು.

ಅ) ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿರುವ ಕೋಟೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ವತಿಯಿಂದ ಮಳಖೇಡ ಕೋಟೆಯ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿರುತ್ತದೆ.

ಆ) ಹಾಗಿದ್ದಲ್ಲಿ, ಇದರ ಅಂದಾಜು ವೆಚ್ಚವೆಷ್ಟು;

ಮಳಖೇಡ ಕೋಟೆಯು ಬಹಳ ವಿಸ್ತಾರವಾಗಿದ್ದು, ಇದರ ಸಂರಕ್ಷಣೆಗಾಗಿ ತಗಲುವ ಒಟ್ಟಾರೆ ಅಂದಾಜು ವೆಚ್ಚ ರೂ.10.00 ಕೋಟಿಗಳು.

ಇ) ಅಭಿವೃದ್ಧಿ ಕೆಲಸವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಕೇಂದ್ರ ಸರ್ಕಾರದ 12ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಈ ಕೋಟೆಯ ಸಂರಕ್ಷಣೆ ಕಾರ್ಯ ಕೈಗೊಳ್ಳಲು ಉದ್ದೇಶಿಸಿದ್ದು, ಅನುದಾನ ಲಭ್ಯವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (268)211
ಸದಸ್ಯರ ಹೆಸರು : ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್. ಯಡಿಯೂರಪ್ಪ)

ಮಾನ್ಯ ಮುಖ್ಯಮಂತ್ರಿಗಳು.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಹಾಗೂ ಚಿತ್ತಾಪೂರ, ಚಿಂಚೋಳಿ ತಾಲ್ಲೂಕುಗಳಲ್ಲಿ ಸುಣ್ಣದ ಕಲ್ಲಿನ ಗಣಿಗಾರಿಕೆಗಾಗಿ ಬಂದಿರುವ ಅರ್ಜಿಗಳೆಷ್ಟು; (ವಿವರ ನೀಡುವುದು);

ಗುಲ್ಬರ್ಗಾ ಜಿಲ್ಲೆಯ ಸೇಡಂ ಚಿತ್ತಾಪೂರ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಸುಣ್ಣದ ಕಲ್ಲಿನ ಗಣಿಗಾರಿಕೆಗಾಗಿ ಒಟ್ಟು 153 ಅರ್ಜಿಗಳನ್ನು ಸ್ವೀಕರಿಸಿದ್ದು, ಈ ಕುರಿತು ವಿವರಗಳನ್ನು ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ.

ಆ) ಇಲ್ಲಿಯವರೆಗೆ ಈ ತಾಲ್ಲೂಕುಗಳಲ್ಲಿ ಮಂಜೂರಾದ ಗಣಿಗುತ್ತಿಗೆ (Mining lease (ML) Prospecting Lease (PL)ಗಳು ಯಾವುವು;(ವಿವರ ನೀಡುವುದು);

ಈ ತಾಲ್ಲೂಕುಗಳಲ್ಲಿ ಇದುವರೆವಿಗೂ ಸುಣ್ಣದ ಕಲ್ಲಿಗಾಗಿ 05 ಗಣಿಗುತ್ತಿಗೆಗಳನ್ನು ಮತ್ತು 04 ಅನ್ವೇಷಣಾ ಲೈಸೆನ್ಸ್‌ಗಳನ್ನು ಮಂಜೂರು ಮಾಡಲಾಗಿದೆ. ಈ ಕುರಿತು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಮಂಜೂರಾಗದೆ ಇರುವ ಇತ್ಯರ್ಥವಾಗುವ (pending) ಅರ್ಜಿಗಳು ಯಾವುವು; (ವಿವರ ನೀಡುವುದು)?

ಸುಣ್ಣದ ಕಲ್ಲಿನ ಗಣಿಗಾರಿಕೆಗಾಗಿ ಸ್ವೀಕರಿಸಿರುವ ಒಟ್ಟು 153 ಅರ್ಜಿಗಳ ಪೈಕಿ, 09 ಅರ್ಜಿಗಳು ಇತ್ಯರ್ಥಗೊಂಡಿದ್ದು, ಇನ್ನುಳಿದಂತೆ 144 ಅರ್ಜಿಗಳು ಬಾಕಿ ಇರುತ್ತದೆ. ಈ ಕುರಿತು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.